(8) 1993-94 ರಿಂದ 1996-97ರವರಗೆ ಪ್ರತಿ ವರ್ಷ 5000 ಪ್ರಾಥಮಿಕ ಶಾಲಾ ಶಿಕ್ಷಕರಂತೆ ಒಟ್ಟು 20000 ಶಿಕ್ಷಕರ ಹುದ್ದೆ ಮಂಜೂರು ಮಾಡಿದೆ.

ಕಪ್ಪುಹಲಗೆ ಕಾರ್ಯ ಯೋಜನೆಯಡಿ 12709 ಹುದ್ದೆಗಳು ಮಂಜೂರಾಗಿವೆ.

(9)

1992-93 ರಲ್ಲಿ	-	6811
1993-94 ರಲ್ಲಿ	-	6812
1994-95 ರಲ್ಲಿ	-	16863
1995-96 ರಲ್ಲಿ	-	8527
1996-97 ರಲ್ಲಿ	-	17997

ಪ್ರಾಥಮಿಕ ಶಿಕ್ಷಕರ ನೇಮಕ ಮಾಡಲಾಗಿದೆ. ಎಲ್ಲಾ ಏಕೋಪಾಧ್ಯಾಯ ಶಾಲೆಗಳನ್ನು ಬಹು ಉಪಾಧ್ಯಾಯ ಶಾಲೆಗಳಾಗಿ ಪರಿವರ್ತಿಸಲಾಗುತ್ತಿದೆ.

ವಿಸ್ತೃತ ಕಪ್ಪುಹಲಗೆ ಕಾರ್ಯ ಯೋಜನೆಯಡಿ 1996-1997ನೇ ಸಾಲಿನಲ್ಲಿ 9513 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಲಿಕಾ ಬೋದನೋಪಕರಣ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಅನಕ್ಷರತೆ ನಿವಾರಣೆಗೆ ಎಲ್ಲಾ ಜಿಲ್ಲೆಗಳಲ್ಲಿ ಸಾಕ್ಷರತಾ ಆಂದೋಲನ ಹಾಗೂ ಸಾಕ್ಷರೋತ್ತರ ಹಾಗೂ ಮುಂದುವರಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ಹೌದು.

ರಾಜ್ಯದಲ್ಲಿ ಶಿಶುಗಳ ಮರಣ ತಡೆಗಟ್ಟುವಿಕೆ :

727 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಶಿಶುಗಳ ಮರಣ ಸಂಖ್ಯೆ ಜಾಸ್ತಿ ಆಗಿರುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಆ) ರಾಜ್ಯದಲ್ಲಿರುವ ಸೆಕೆಂಡರಿ ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವಸಲುವಾಗಿ ಸರ್ಕಾರದವರು ಕೈಗೊಂಡಿರುವ ಯೋಜನೆಗಳಾವುವು ?

ಡಾ|| ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇತ್ತೀಚಿನ ಸಮೀಕ್ಷೆಯಂತೆ (1995) ರಾಷ್ಟ್ರೀಯ ಮಟ್ಟದ ಶಿಶು ಮರಣ ದರ 74ಕ್ಕೆ ಹೋಲಿಸಿದಾಗ ಕರ್ನಾಟಕ ರಾಜ್ಯದ ಶಿಶು ಮರಣ ದರ 62 ಇದೆ ಎಂದು ತಿಳಿದು ಬಂದಿದೆ. ಈ ದರ ಪ್ರತಿ ವರ್ಷವೂ ಕಡಿಮೆಯಾಗುತ್ತಿರುವುದು ಕಂಡು ಬಂದಿದೆ. ರಾಜ್ಯದಲ್ಲಿ ಇನ್ನೂ ಶಿಶು ಮರಣ ದರ

ಕಡಿಮೆ ಮಾಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗಲಾಗುತ್ತಿದೆ;

1. ಗರ್ಭಿಣಿಯರ ದಾಖಲಾತಿ (ಬೇಗ ನೊಂದಾಯಿಸುವುದು)
2. ಅಪೌಷ್ಟಿಕತೆ ತಡೆಗಟ್ಟಲು -ಪೌಷ್ಟಿಕ ಆಹಾರ ಸೇವನೆ ಮಾಹಿತಿ ಮತ್ತು ಪೂರೈಕೆ, ಶಿಕ್ಷಣ, ಸಂಪರ್ಕ ಕಾರ್ಯಕ್ರಮ ಏರ್ಪಡಿಸುವುದು.
3. ಗಂಡಾಂತರದಲ್ಲಿ ಗರ್ಭಿಣಿಯರನ್ನು ಗುರುತಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ಮಟ್ಟದ ಆಸ್ಪತ್ರೆಗೆ ಕಳುಹಿಸುವುದು.
4. ದಾದಿಯರಿಗೆ ತರಬೇತಿ ನೀಡುವುದು.
5. ಶುಚಿಯಾದ ಹೆರಿಗೆ ಸೇವೆ ಒದಗಿಸುವುದು.
6. ರಾಜ್ಯದಲ್ಲಿ ಶಿಶು ಮಿತ್ರ ಆಸ್ಪತ್ರೆ ಸ್ಥಾಪಿಸಿ ಮುಂದುವರೆಸಿಕೊಂಡು ಹೋಗುತ್ತಿರುವುದು.
7. ನವಜಾತ ಶಿಶುವಿನ ಆರೈಕೆ.
8. ಲಸಿಕಾ ಕಾರ್ಯಕ್ರಮ.
9. ಮಕ್ಕಳಲ್ಲಿ ಅತಿಸಾರ ಭೇದಿ ಪ್ರಕರಣ ನಿರ್ವಹಣೆ.
10. 'ಎ' ಅನ್ನಾಂಗ ಕೊರತೆ ನಿವಾರೋಣೋಪಾಯ.
11. ಮಕ್ಕಳಲ್ಲಿ ನ್ಯೂಮೋನಿಯ ನಿರ್ವಹಣೆ ಹಾಗೂ ತಡೆಗಟ್ಟುವಿಕೆ.
12. ಕುಟುಂಬ ಕಲ್ಯಾಣ ಯೋಜನೆ (ಸಂತಾನದಲ್ಲಿ ಅಂತರತೆ)

ಆ) ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಬೆಳಗಾಂ, ಬೆಂಗಳೂರು, ಮೈಸೂರು ವಿಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ಬಂದಿದ್ದು. ಜರ್ಮನ್ ದೇಶದ ಕೆ.ಎಸ್.ಡಬ್ಲೂ. ಸಂಸ್ಥೆಯ ನೆರವಿನಿಂದ ಗುಲ್ಬರ್ಗಾ ವಿಭಾಗದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೊಡುಗೆ ಸಂಸ್ಥೆಯಿಂದ ಅನುಮೋದಿಸಲ್ಪಟ್ಟಿರುವಂತೆ ಜಾರಿಗೆ ತರಲಾಗುವುದು. ಡಿಸೆಂಬರ್ 95ರಿಂದ ಓಪೆಕ್ ಸಂಸ್ಥೆ ನೆರವಿನಿಂದ ರಾಯಚೂರು ಜಿಲ್ಲಾ ಆಸ್ಪತ್ರೆಯನ್ನು ಆಧುನಿಕರಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ.

ಬೆಂಗಳೂರಿನ ಗ್ರಂಥಾಲಯಗಳಿಗೆ ಪುಸ್ತಕಗಳ ಸೇರ್ಪಡೆ

729 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಗ್ರಂಥಾಲಯಗಳಲ್ಲಿ 1996ರಲ್ಲಿ ಪ್ರಕಟವಾದ ಎಲ್ಲಾ ಭಾಷೆಯ, ಹಲವಾರು ವಿಷಯಗಳಿಗೆ ಸಂಬಂಧಪಟ್ಟಂತೆ ಪುಸ್ತಕಗಳು ಸೇರ್ಪಡೆಯಾಗಿವೆಯೇ?